ಉ) ಈ ಕುರಿತು ಬ್ಯಾಂಕ್ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನವನ್ನು ಸರ್ಕಾರ ನೀಡುವ ಬಗ್ಗೆ ಯೋಚಿಸುವುದೇ ?

ಶ್ರೀ ಎಂ.ಪಿ ಪ್ರಕಾಶ್ (ಕಂದಾಯ ಸಚಿವರು) :

ಅ) ಹೌದು, ಈ ಯೋಜನೆಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಗ್ರಾಮ ಮಟ್ಟಕ್ಕೆ ವಿಕೇಂದ್ರೀಕರಿಸಲಾಗಿದೆ. ಇನ್ನು 2–3 ತಿಂಗಳುಗಳಲ್ಲಿ ತಾಲ್ಲೂಕುಗಳು ರಾಜ್ಯ ಮಟ್ಟದಲ್ಲಿ ಜೋಡಣೆಯಾದ ನಂತರ ರೈತರಿಗೆ ಗ್ರಾಮ ಮಟ್ಟದಲ್ಲಿಯೇ ಭೂ ದಾಖಲೆಗಳನ್ನು ಒದಗಿಸಲಾಗುವುದು.

ಆ) ರೈತರ ಅಪಸಾತಿ ವಾಟ್ನಿ (ಮ್ಯೂಚುವಲ್ ಪಾರ್ಟಿಶನ್)ಬಗ್ಗೆ ನೊಂದಣಿ ಮಾಡುವುದು ಅವಶ್ಯವಿಲ್ಲವೆಂದು ದಿ : 15–03–1997 ರಂದು ಕಂದಾಯ ಇಲಾಖೆಯವರು ಸುತ್ತೋಲೆ ಹೊರಡಿಸಿದೆ.

ಇ) ದಾಖಲಿಸಲಾಗುತ್ತಿದೆ.

ಈ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಉ) ಈ ಬಗ್ಗೆ ಪರಿಶೀಲಿಸಿ ಅವಶ್ಯಕತೆ ಇದ್ದಲ್ಲಿ ಸರ್ಕಾರದಿಂದ ಬ್ಯಾಂಕ್ ಅಧಿಕಾರಿಗಳಿಗೆ ಸೂಕ್ತ ನಿರ್ದೇಶವನ್ನು ನೀಡಲಾಗುವುದು.

775(1329) ಶ್ರೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ(ಕಿತ್ತೂರು) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರೆವಿನ್ಯೂ ಸ್ಟ್ಯಾಂಪುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಇದರ ಪೂರೈಕೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ.

ಆ) ಸರ್ಕಾರ ಈಗ ರೆವಿನ್ಯೂ ಸ್ಟ್ಯಾಂಪ್‌ಗಳ ಬಳಕೆ ಅಗತ್ಯವಿಲ್ಲವೆಂದು ಘೋಷಿಸಿದೆಯೇ ?

ಇ) ಇಲ್ಲದಿದ್ದಲ್ಲಿ ಸದರಿ ಸ್ಟ್ಯಾಂಪುಗಳು ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವುದು ನಿಜವೇ?

ಈ) ಹಾಗಿದ್ದಲ್ಲಿ ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುವುದೆಂದು ಸರ್ಕಾರ ಭಾವಿಸುವುದಿಲ್ಲವೇ ?

ಉ) ಇದರ ಜೊತೆಯಲ್ಲಿ ಬಾಂಡ್ ಪೇಪರುಗಳ (ಛಾಪಾ ಕಾಗದಗಳು) ಪೂರೈಕೆಯನ್ನು ಕೇವಲ ಎರಡು ಬ್ಯಾಂಕುಗಳಿಗೆ ಮಾತ್ರ ವಹಿಸಿರುವುದರಿಂದ ತೊಂದರೆಯಾಗುತ್ತಿರುವ ಬಗ್ಗೆ ಸರ್ಕಾರ ಎರೆಡು ಬ್ಯಾಂಕುಗಳಿಗೆ ಮಾತ್ರ ವಹಿಸಿರುವುದರಿಂದ ತೊಂದರೆಯಾಗುತ್ತಿರುವ ಬಗ್ಗೆ ಸರ್ಕಾರ ಯಾವ ಪರ್ಯಾಯ ಕ್ರಮಗಳನ್ನು ಕೈಗೊಳ್ಳುವುದು .

ಊ) ಸದರಿ ಬಾಂಡುಗಳು ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಿಗುವಂತೆ ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು ವಿವರಿಸಿ ?

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು) :

ಅ) ಹೌದು.

ಸರ್ಕಾರವು ದಿನಾಂಕ : 01–04–2003 ರಿಂದ ಜಾರಿಗೆ ಬರುವಂತೆ ಸ್ಟ್ಯಾಂಪ್ ಬಳಕೆಯನ್ನು ಸ್ಥಗಿತಗೊಳಿಸಿದೆ.

ಭಾರತ ಮುದ್ರಾಂಕ ಕಾಯಿದೆ 1899 ರಡಿ ರೆವಿನ್ಯೂ ಸ್ಟ್ಯಾಂಪ್ ಬಳಸುವುದರಿಂದ ಕರ್ನಾಟಕ ರಾಜ್ಯಕ್ಕೆ ಸೀಮಿತವಾದಂತೆ, ವಿನಾಯಿತಿ ನೀಡಲು ಹಾಗೂ ಅಧಿಸೂಚನೆ ಹೊರಡಿಸಲು ಭಾರತ ಸರ್ಕಾರಕ್ಕೆ ದಿನಾಂಕ : 30–12–2003ರಂದು ಪ್ರಸ್ತಾವನೆ ಸಲ್ಲಿಸಲಾಗಿದೆ.

ಭಾರತ ಸರ್ಕಾರದ ರಾಜ್ಯಪತ್ರ ದಿನಾಂಕ : 10–9–2004ರ ಅಧಿಸೂಚನೆಯಂತೆ 5,000–00ಗಳ ವರೆಗಿನ ವ್ಯವಹಾರಗಳಿಗೆ ರೆವಿನ್ಯೂ ಸ್ಟ್ಯಾಂಪ್ ವಿನಾಯಿತಿ ನೀಡಿದೆ.

ರೂ. 5,000/– ಕ್ಕಿಂತ ಮೇಲ್ಪಟ್ಟ ವ್ಯವಹಾರಗಳಿಗೆ ರೆವಿನ್ಯೂ ಸ್ಟ್ಯಾಂಪ್ ಬಳಕೆ ಅವಶ್ಯವಿರುವುದರಿಂದ ಬ್ಯಾಂಕ್ ಹಾಗೂ ಇತರೆ ಸಂಸ್ಥೆಗಳು ಇಡಿಯಾಗಿ ರೆವಿನ್ಯೂ ಸ್ಟ್ಯಾಂಪ್ ಹಣವನ್ನು ಲೆಕ್ಕ ಶೀರ್ಷಿಕೆ 0030–02–800–0–01ಗೆ ಪಾವತಿಸಬಹುದಾಗಿದೆ.

ರೆವಿನ್ಯೂ ಸ್ಟ್ಯಾಂಪ್‌ಗಳನ್ನು ಸಾರ್ವಜನಿಕರಿಗೆ ಪೋಸ್ಟ್ ಆಫೀಸ್ ಮೂಲಕ ಮಾರಾಟ ಮಾಡಲು ಪರಿಶೀಲಿಸಲಾಗುತ್ತಿದೆ.

ಆ) ಇಲ್ಲ

ಇ) ಸರ್ಕಾರದ ಗಮನಕ್ಕೆ ಬಂದಿಲ್ಲ.

ಈ) ಮೇಲಿನಂತೆ

ಉ) ಈಗಾಗಲೇ ಬಾಂಡು ಪೇಪರುಗಳ ಪೂರೈಕೆಯನ್ನು SBM, SBI, SBH ಈ ಬ್ಯಾಂಕುಗಳಲ್ಲಿ ವಿತರಿಸಲು ಅನುಮತಿ ನೀಡಲಾಗಿದೆ. ಕರ್ನಾಟಕ ಬ್ಯಾಂಕಿಗೂ ಅನುಮತಿ ನೀಡಲು ಕ್ರಮ ಕೈಗೊಂಡಿದೆ.

ಊ) SBM, SBI, SBH ಈ ಮೂರು ರಾಷ್ಟ್ರೀಕೃತ ಬ್ಯಾಂಕುಗಳು ರಾಜ್ಯಾದ್ಯಂತ ಇರುತ್ತದೆ. ಇವುಗಳು ಮಾತ್ರ ಟ್ರೆಜರಿ ಬ್ಯಾಂಕುಗಳಾಗಿರುತ್ತವೆ. ಸಂಬಂಧಿಸಿದ ಉಪ ನೋಂದಣಿ ಕಛೇರಿಗಳಲ್ಲಿ ಮುದ್ರಾಂಕ ಶುಲ್ಕ ತೆಗೆದುಕೊಳ್ಳಲಿಲ್ಲ ಕ್ರಮ ಕೈಗೊಂಡಿದೆ.

776(722) ಶ್ರೀ ನಿರ್ಮಲ್ ಸುರಾನಾ (ಭಾರತಿನಗರ) : ಮಾನ್ಯ ಕೃಷಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಪರ್ಯಾಯ ಇಂಧನವಾಗಿ ಹೊಂಗೆ ಎಣ್ಣೆಯನ್ನು ವಾಹನಗಳಿಗೆ ಬಳಸುವುದು ಅಗತ್ಯವಾಗಿರುವ ಪ್ರಾಯೋಗಿಕ ಪರೀಕ್ಷೆಗಳು ಯಾವ ಹಂತದಲ್ಲಿವೆ ?

ಆ) ಬಳಕೆಗೆ ಹೊಂಗೆ ಎಣ್ಣೆ ಯೋಗ್ಯವೆಂದಾದಲ್ಲಿ ಸರ್ಕಾರ ಹೊಂಗೆ ಕೃಷಿಗೆ ನೀಡಲಾಗುವ ಪ್ರೋತ್ಸಾಹವೇನು ?

ಇ) ಹೊಂಗೆ ಕೃಷಿ ಮಾಡಲು ಮುಂದೆ ಬರುವ ರೈತ ಫಲಾನುಭವಿಗೆ ಸರ್ಕಾರಿ ಜಮೀನನ್ನು ದೀರ್ಘ ಗುತ್ತಿಗೆ ಆಧಾರದ ಮೇಲೆ ಅಥವಾ ರಿಯಾಯಿತಿ ದರದಲ್ಲಿ ಕ್ರಯಕ್ಕೆ ನೀಡುವ ಪ್ರಸ್ತಾವನೆ ಸರ್ಕಾರಕ್ಕಿದೆಯೇ ?

ಈ) ಹೌದಾದಲ್ಲಿ, ಹೊಂಗೆ ಕೃಷಿಕರು ಕೃಷಿ ಆಸಕ್ತರು ಪೂರೈಸಬೇಕಾದ ವಿಧಿವಿಧಾನ ಮತ್ತು ಷರತ್ತುಗಳೇನು? (ವಿವರ ನೀಡುವುದು)

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಪರ್ಯಾಯ ಇಂಧನವಾಗಿ ಹೊಂಗೆ ಎಣ್ಣೆಯನ್ನು ವಾಹನಗಳಿಗೆ ಬಳಸುವ ಬಗ್ಗೆ ಕೃಷಿ ಇಲಾಖೆಯು ಯಾವುದೇ ಪ್ರಾಯೋಗಿಕ ಪರೀಕ್ಷೆಗಳನ್ನು ತೆಗೆದು ಕೊಂಡಿರುವುದಿಲ್ಲ.

ಆ) ಕರ್ನಾಟಕ ರಾಜ್ಯ ಕೃಷಿ ಇಲಾಖೆ, ಕೃಷಿ ವಿಶ್ವವಿದ್ಯಾನಿಲಯ ಧಾರವಾಡ & ಬೆಂಗಳೂರು ಹಾಗೂ ಸೂತ್ರ ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು ಜಂಟಿಯಾಗಿ ರಾಜ್ಯದಲ್ಲಿ ಜೈವಿಕ